# ಚಿತ್ರಾಕ್ಷರ



ಪ್ರಭು ಹರಸೂರ್

ತುಮಕೂರಿನ ರವೀಂದ್ರ ಕಲಾನಿಕೇತನ ಸಂಸ್ಥೆಯಲ್ಲಿ ಉಪನ್ಯಾಸಕರಾಗಿರುವ ಪ್ರಭು ಹರಸೂರ್ (ಜ.1962) ಅವರು ಮೂಲತಃ ಗುಲ್ಬರ್ಗದವರು. ದಾವಣಗೆರೆ, ಬೆಂಗಳೂರು, ಮೈಸೂರು, ಪಾಂಡಿಚೇರಿ, ಚೆನ್ನೈಗಳಲ್ಲಿ ಆರು ಏಕವ್ಯಕ್ತಿ ಪ್ರದರ್ಶನ ಏರ್ಪಡಿಸಿರುವ ಪ್ರಭು ಅವರು 22ಕ್ಕೂ ಹೆಚ್ಚು ಸಮೂಹ ಪ್ರದರ್ಶನದಲ್ಲಿ ಭಾಗವಹಿಸಿದ್ದಾರೆ. ಜಾನಪದೀಯ ಅಂಶಗಳನ್ನು ಒಳಗೊಂಡ ಅವರ ಕಲಾಕೃತಿಗಳಲ್ಲಿ 'ತೊಗಲು ಗೊಂಬೆ' ರಚನೆಯ ಹಾಗೂ ಶರಣ ಸಾಹಿತ್ಯದ 'ಉದ್ಧರಣೆ ಚಿತ್ರ'ಗಳ ಪ್ರಭಾವ ದಟ್ಟವಾಗಿದೆ.

'ಉದ್ಧರಣೆ ಚಿತ್ರ'ಗಳ ಪ್ರೇರಣೆಯಿಂದ ಪ್ರಭು ಹರಸೂರು ಅವರು ರಚಿಸಿರುವ ನೂತನ ಸರಣಿಯ ಕಲಾಕೃತಿಗಳಲ್ಲಿ ಎಲ್ಲಾ ಕಾಯಕವು 'ಮಂಗಳಮಯವಾದದ್ದು', 'ಶುಭವಾದದ್ದು' ಹಾಗೂ 'ಸಮಾನತೆ'ಯಿಂದ ಕೂಡಿದ್ದು; ಜಾತಿಯ ಹೆಸರಿನಲ್ಲಿ ಮೇಲು ಕೀಳು ಎಂಬ ಭೇದ–ಭಾವ ಮಾಡಬಾರದು ಎಂಬ ಮೂಲಚಿಂತನೆಯಿದೆ.

'ಉದ್ಧರಣೆ ಸಾಹಿತ್ಯಕ್ಕೆ ಲಿಂಗಾಯತ ಧರ್ಮದಲ್ಲಿ ವಿಶೇಷ ಸ್ಥಾನವಿದೆ. ವಾಚ್ಯಾ ವರ್ಣಗಳಿಂದ ಕೂಡಿದ ಈ ಸಾಹಿತ್ಯ ಲಿಂಗಾಯತರು ಚಿತ್ರಸಾಹಿತ್ಯಕ್ಕೆ ನೀಡಿದ ಅಪೂರ್ವ ಕಾಣಿಕೆಯೆನಿಸಿದೆ. 'ಉದ್ಧರಣೆ' ಎಂದರೆ ಉದ್ಧರಿಸು, ಮೇಲಕ್ಕೆತ್ತು, ಬಂಧನದಿಂದ ಮುಕ್ತಗೊಳಿಸು, ಪರಿಪೂರ್ಣ ಹಂತಕ್ಕೆ ಮುಟ್ಟಿಸು ಎಂಬ ಅರ್ಥಗಳಿವೆ. ಲಿಂಗಾಯತ ತತ್ವಗಳಾದ 'ಅನಾದಿ ಉದ್ಧರಣೆ', 'ಶೂನ್ಯ ಉದ್ಧರಣೆ', 'ಅಧೋ ಕುಂಡಲಿ ಉದ್ಧರಣೆ', 'ಊರ್ಧ್ವ ಉದ್ಧರಣೆ' ಹೀಗೆ 24ಕ್ಕಿಂತ ಹೆಚ್ಚಿರುವ ರಹಸ್ಯವನ್ನು ತಿಳಿಸುತ್ತವೆ. ಉದ್ಧರಣೆಯಲ್ಲಿ ಬರುವ ಬೀಜಾಕ್ಷರಗಳು, ಲಿಂಗರೂಪಗಳು, ಬಸವ (ಎತ್ತು) ಆಕಾರಗಳು, ವಿವಿಧ ನಕ್ಷೆಗಳ ವಿನ್ಯಾಸ, ಸರಳವಾದ ರೇಖಾಲಾಲಿತ್ಯಗಳು, ಬಣ್ಣಗಳ ಸಂಯೋಜನೆ ಒಂದು ರೀತಿಯ ಜನಪದ ಶೈಲಿಯ ಆಕಾರಗಳಂತೆ ಕಂಡವು' ಎಂದು 'ಉದ್ಧರಣೆ ಚಿತ್ರ'ಗಳ ಕುರಿತು ಪ್ರಭು ವಿವರಿಸುತ್ತಾರೆ.

'ಕಲಾವಿದ ಲೇಖಕ ಬಿ.ಕೆ. ಹಿರೇಮಠ ಅವರ ಪುಸ್ತಕದಲ್ಲಿ 'ಜಿಂಕೆಯ ಮುಖ, ಉದ್ದನೆಯ ಕೊಂಬು, ಸ್ತ್ರೀ ದೇಹ ಹಾಗೂ ಆಕಳ ದೇಹ, ಬಾಲ ಹಾವಿನದಾಗಿದ್ದು, ಚಿರತೆ–ಹಸು–ಜಿಂಕೆಯ ಕಾಲುಗಳು, ಕೆಚ್ಚಲಿಗೆ ಬಾಯಿ ಹಾಕಿರುವ ಮೀನು, ನಾಲ್ಕು ಕೈಗಳಿಂದ ಕೂಡಿದ ಚಿತ್ರ' ನೋಡಿ ಹುಟ್ಟಿದ 'ಉದ್ಧರಣೆ ಚಿತ್ರ' ಕುತೂಹಲವು ಹಂಪಿ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿಗಾಗಿ ಅಧ್ಯಯನ ನಡೆಸುವಾಗ ಮುಂದುವರೆಯಿತು. ಅಲ್ಲಿಯೇ 'ಹಸ್ತಪ್ರತಿ ಪ್ರದರ್ಶನ' ನಡೆದಾಗ ಉದ್ಧರಣೆ ಚಿತ್ರಗಳನ್ನು ನೋಡಿ, ಆನಂದಿಸಿದೆ. ಅಧ್ಯಯನದ ಭಾಗವಾಗಿದ್ದ ಕಿರುಸಂಶೋಧನ ಪ್ರಬಂಧಕ್ಕಾಗಿ 'ಉದ್ಧರಣೆ ಚಿತ್ರ'ದ ವಿಷಯ ಆಯ್ಕೆ ಮಾಡಿಕೊಂಡು ಆಕೃತಿಗಳನ್ನು ಸಂಗ್ರಹಿಸಿದೆ. ಅವುಗಳ ಜೊತೆಗೆ ನನ್ನ ಆಧ್ಯಾತ್ಮಿಕ ಗುರುಗಳಿಂದ ಕಲಿತ ಧ್ಯಾನ–ಚಿಂತನೆಗಳು ನನ್ನನ್ನು ಈ ಕಲಾಕೃತಿ ರಚಿಸಲು ಹಚ್ಚಿದವು' ಎಂದು ಪ್ರಭು ಅವರು ಹೇಳುತ್ತಾರೆ.

